**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 29/2023**

**ಚಾ.ಸಾ. :-2**
**ಪ್ರಾ.ಸಾ. :-4**

ಹೆಸರು : ನಿತಿನ್

ತಂದೆಯ ಹೆಸರು : ಮಂಜುನಾಥ್

ವಯಸ್ಸು : 37 ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಕಿರಂಗೂರು ಗ್ರಾಮ

---

**ಪ್ರಮಾಣೀಕರಿಸಲಾದ ದಿನಾಂಕಃ- 02.02.2026**

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :**

ಮೃತ ಸುನೀತಾ ರವರು ನಮ್ಮ ಊರಿನವರು, ಪರಿಚಯ. ದಿನಾಂಕಃ 27.03.2023 ರಂದು ರಾತ್ರಿ ಸುಮಾರು 10.30 ರ ಸಮಯದಲ್ಲಿ ನಾನು ಮನೆಯ ಬಳಿ ಇದ್ದು ಅಪಘಾತವಾದ ನಂತರ ಜೋರಾಗಿ ಶಬ್ದ ಕೇಳಿ ಬಂದಿರುತ್ತದೆ. ಶಬ್ದ ಕೇಳಿ ನಾನು, ಚಾ.ಸಾ-3 ಮತ್ತು 4 ರವರು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇವೆ. ಆಗ ಅಪಘಾತಕ್ಕೊಳಗಾದವರು ಸುನೀತಾ ಎಂದು ಗೊತ್ತಾಗಿರುತ್ತದೆ. ಅಪಘಾತವನ್ನು ನಾನು ನೇರವಾಗಿ ನೋಡಿರುವುದಿಲ್ಲ. ಅಪಘಾತವು ಹೇಗೆ, ಯಾವ ರೀತಿ ಹಾಗೂ ಯಾರ ನಿರ್ಲಕ್ಷ್ಯತನದಿಂದ ಉಂಟಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ನಿಪಿ-3 ರಲ್ಲಿ ನನ್ನ ಭಾವಚಿತ್ರ ಇದೆ. ಸ್ಥಳಕ್ಕೆ ಹೋಗಿ ನೋಡಿದಾಗ ಓವರ್ ಟೇಕ್ ಮಾಡಲು ಹೋಗಿ ಲಾರಿ ದ್ವಿಚಕ್ರ ವಾಹನಕ್ಕೆ ಗುದ್ದಿರುವಂತೆ ಕಾಣುತ್ತದೆ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಸ.ಸ.ಅ.ರವರಿಂದ :**

ಸದರಿ ಅಪಘಾತವನ್ನು ನಾನು ನೇರವಾಗಿ ನೋಡಿರುತ್ತೇನೆಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ಅಪಘಾತ ಸ್ಥಳದಿಂದ ನಮ್ಮ ಮನೆ ಸುಮಾರು 200 ಮೀ.ದೂರದಲ್ಲಿರುತ್ತದೆ. ಅಪಘಾತವನ್ನು ನಾನು ನೇರವಾಗಿ ನೋಡಿಲ್ಲ, ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ. ಸುನೀತಾರವರ ತಂದೆ-ತಾಯಿ ನಮ್ಮ ಊರಿನಲ್ಲಿ ವಾಸವಿದ್ದಾರೆ. ಸುನೀತಾರವರ ತಂದೆ-ತಾಯಿ ಪೊಲೀಸರಿಗೆ ದೂರು ಕೊಟ್ಟಿರುತ್ತಾರೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಚಾ.ಸಾ-3 ಮತ್ತು 4 ನನ್ನ ಸ್ನೇಹಿತರು. ಚಾ.ಸಾ-1 ರವರಿಗೆ ಗಾಯಗಳಾಗಿರಲಿಲ್ಲ. ಅಪಘಾತ ಸ್ಥಳಕ್ಕೆ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ವಿಮೆ ಪರಿಹಾರ ಕೊಡಿಸುವ ಸಲುವಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**